# ಮಹಾನುಭಾವ ಮಾದರ ಚೆನ್ನಯ್ಯ

ಸಿದ್ಧಯ್ಯ ಪುರಾಣಿಕ

**ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದೊಡೆಯೂ ಅಯ್ಯ ಎನಲಾರೆನಯ್ಯಾ. ಚೆನ್ನಯ್ಯನೆಮ್ಮಯ್ಯನು. ಚೆನ್ನಯ್ಯನ ಮಗ ನಾನು. ಚೆನ್ನಯ್ಯನ ಮನೆಯ ದಾಸನ ಮಗ ನಾನು. ಚೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪಯ್ಯ. ಅಯ್ಯಗಳ ಅಯ್ಯ ನಮ್ಮ ಮಾದಾರ ಚೆನ್ನಯ್ಯ. ಕುಲತಿಲಕ ನಮ್ಮ ಮಾದಾರ ಚೆನ್ನಯ್ಯ. ಉನ್ನತ ಮಹಿಮ, ಉಮೇಶನಿಂದಧಿಕ. ಚಿಕ್ಕಯ್ಯ ಚೆನ್ನಯ್ಯಗಳೆತ್ತಿ ಮುದ್ದಾಡಿದರೆನ್ನ. ಮಹಾದಾನಿ ಕೂಡಲಸಂಗಮದೇವಾ, ಮಾದರ ಚೆನ್ನಯ್ಯನ ಮಗ ನಾನಯ್ಯ!**

ಬಸವಣ್ಣನವರಂಥವರು ಇಷ್ಟು ಮನವುಕ್ಕಿ, ಮೈಯುಬ್ಬಿ ಕೊಂಡಾಡಿರುವ ಈ ಚೆನ್ನಯ್ಯನಾರು? ಈ ಮಹಾನುಭಾವನನ್ನು ಎಷ್ಟು ಹೊಗಳಿದರೂ ತೃಪ್ತಿಯಿಲ್ಲ ಬಸವಣ್ಣನವರಿಗೆ.


**ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ, ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯ**

**ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದೊಡೆ ಚೆನ್ನ, ಪ್ರಮಥರೊಳಗೆ ಚೆನ್ನ, ಪುರಾತನರೊಳಗೆ ಚೆನ್ನ, ಸವಿದು ಸವಿದು ನೋಡಿ ಅಂಬಲಿ ರುಚಿಯಾಯಿತ್ತೆಂದು ಕೂಡಲ ಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ.**

ಬಸವಣ್ಣನವರ ಈ ಭಾವಪೂರಿತ ವಚನಗಳನ್ನು ಓದುತ್ತಿದ್ದಂತೆ ಚೆನ್ನಯ್ಯನ ಮಹೋನ್ನತ ವ್ಯಕ್ತಿತ್ವ ಕಣ್ಣೆದುರು ರೂಪುಗೊಳ್ಳುತ್ತದೆ. "ಉನ್ನತ ಮಹಿಮ ಉಮೇಶನಿಂದಧಿಕ!" ಇಷ್ಟೊಂದು ವಿಧವಿಧವಾಗಿ ಸ್ತುತಿಸಿಕೊಂಡ ಮಾದರ ಚೆನ್ನಯ್ಯ ನಿಜವಾಗಿಯೂ ಮಹಾನುಭಾವ.

ಕಂಚಿಯಲ್ಲಿ ಕೂಡ ಕನ್ನಡದ ಕಹಳೆ ಮೊಳಗುವಂತೆ ಮಾಡಿದ ಮಹಾತ್ಮನೀತ. 'ಪೆರಿಯ ಪುರಾಣ' ವನ್ನು ಬರೆಸಿ ಶಿವಭಕ್ತಶಿರೋಮಣಿಯೆನಿಸಿ ಮೆರೆಯುತ್ತಿದ್ದ ಕರಿಕಾಲಚೋಳನು ಕಂಚಿಯಲ್ಲಿ ರಾಜ್ಯವಾಳುತ್ತಲಿದ್ದ ಕಾಲವದು. ಚೆನ್ನಯ್ಯ ಕರಿಕಾಲ ಚೋಳನ ಅಶ್ವಾಲಯಕ್ಕೆ ಹುಲ್ಲು ಒದಗಿಸುವ ಕಾಯಕ ಕೈಕೊಂಡಿದ್ದ. ಈ ಕಾಯಕವನ್ನೇ ಜೀವನಾಧಾರವನ್ನಾಗಿ ಮಾಡಿಕೊಂಡಿದ್ದ. ಕಬಾಡಿಗರಿಗೆಲ್ಲ (ಹುಲ್ಲು ಹೊರುವವರು) ಹಿರಿಮಣಿಯಾದ. ಈ ಲಿಂಗಾಭಿಮಾನಿ, ಲಿಂಗಾನುಭಾವಿ ನಿತ್ಯವೂ ಕಬಾಡಿಗರನ್ನು ಕೂಡಿಕೊಂಡು ಕಾನನಕ್ಕೆ ಹೋಗುತ್ತಿದ್ದ. ಅಲ್ಲಿ ಎಲ್ಲರೂ ಕೂಡಿ ಹುಲ್ಲು ಕೊಯ್ದು ಹೊರೆ ಕಟ್ಟುತ್ತಿದ್ದರು. ಉಳಿದವರು ಅಷ್ಟರಿಂದಲೇ ಸಂತುಷ್ಟರಾದರೆ ಚೆನ್ನಯ್ಯನ ಪರಿಯೇ ಬೇರೆ. **"ತನುವು ಚೋಳ, ನಿರಾಳ ಮನವು ಲಿಂಗದಿ ಮೇಳ, ವ್ಯಕ್ತದಿ ಮಾದಾರ, ಗುಪ್ತದಿ ಮಹೇಶ್ವರನಾಗಿ ಬಾಳುತ್ತಿದ್ದನಾತ."**

ದಿವಂಗತ ಲೇಖಕರು ಪ್ರಖ್ಯಾತ ಲೇಖಕರು. ಶರಣಸಾಹಿತ್ಯದಲ್ಲಿ ಅವರದು ಅಪಾರ ಪಾಂಡಿತ್ಯ.



ಹರಿಹರ ಮಹಾಕವಿ ಅವನ ಶಿವಮಾನಸಪೂಜೆಯ ಸೊಗಸನ್ನು ಹೀಗೆ ಚಿತ್ರಿಸಿದ್ದಾನೆ: ಚೆನ್ನಯ್ಯ ಕಂಡುದುದ ಶಿವಲಿಂಗಕ್ಕೆ, ಕೊಂಡುದುದ ಗುರುಲಿಂಗಕ್ಕೆ, ಕೇಳಿದುದ ಪ್ರಾಣಲಿಂಗಕ್ಕೆ, ವಾಸಿಸಿದುದ ಆಚಾರಲಿಂಗಕ್ಕೆ, ಸ್ಪರ್ಶಿಸಿದುದ ಜಂಗಮಲಿಂಗಕ್ಕೆ, ನೆನೆದುದ ಮಹಾಲಿಂಗಕ್ಕೆ ಅರ್ಪಿಸುವುದನ್ನು ಅಳವಡಿಸಿಕೊಂಡಿದ್ದ ಅನುಭಾವಿ. ತನ್ನ ಷಡಿಂದ್ರಿಯಗಳಲ್ಲಿ ಷಡ್ಲಿಂಗಗಳನ್ನು ಧರಿಸಿ ಸರ್ವವನ್ನೂ ಶಿವಾರ್ಪಿತ ಮಾಡುತ್ತಲಿದ್ದ ಶಿವಶರಣ. ಒಟ್ಟಿನಲ್ಲಿ ಅವನದು ಅನುಭಾವಕ್ಕೆ ಅರ್ಪಿತವಾದ ಬಾಳು. ಹುಲ್ಲು ಕೊಯ್ದು ಹೊರೆ ಕಟ್ಟುವವರೆಗೆ ಅಂತರಂಗದಲ್ಲಿ ಪೂಜೆ, ಈ ಹೊರೆ ಮುಗಿಯುತ್ತಲೆ ಬಹಿರಂಗದಲ್ಲಿ ಪೂಜೆ. 'ಸೂರಿಜನ ಹರ್ಷವಿಸ್ತಾರಿ' ಯಾದ ಕಾವೇರಿಯ ತೀರದಲ್ಲೊಂದು ಕಣ್ಣೆಳಲ ತಾಣ. ಅಲ್ಲೊಂದು ಮಲ್ಲಿಗೆಯ ಮಂಟಪ. ಅಲ್ಲಿ ಮಣಲ ಕಟ್ಟೆಯ ಕಟ್ಟಿ, ತಳಿರ ಹಾಸನ್ನು ಹಾಸಿ, ಲಿಂಗಪೂಜೆಗೆ ಕೂರುವನು.

**ಬಾರಯ್ಯ ಬಾರ ಶಿವಭಕ್ತೈಕ ಬಂಧುವೆ**
**ಬಾರಯ್ಯ ಬಾರ ಕಾರುಣ್ಯರಸ ಸಿಂಧುವೆ**
**ಗುರುವೆ ವರಗುರುವೆ ಸದ್ಗುರುವೆ ಗುರುಲಿಂಗವೆ**
**ಭರದಲರ್ಚಿಪ ಜನದ ಮನದ ಸರ್ವಾಂಗವೆ**

ಎಂದು ಸಜ್ಜೆಯಿಂದ ಶಿವನ ಕುರುಹಾದ ಲಿಂಗವನ್ನು ತೆಗೆದು, ಕರದ ಸರಸಿಜ ಪೀಠದಲ್ಲಿರಿಸಿ, ಮೊಲ್ಲೆ ಮಲ್ಲಿಗೆಗಳನ್ನು ಧರಿಸಿ, ಕಣ್ಣುಗಳಲ್ಲಿ ಲಿಂಗಮೂರ್ತಿಯನ್ನು ತುಂಬಿಕೊಂಡು, ಮಾತಿನಲ್ಲಿ ಲಿಂಗಕೀರ್ತಿಯನ್ನು ತುಂಬಿಕೊಂಡು, ಚಿತ್ತದಲ್ಲಿ ಲಿಂಗಪ್ರೀತಿಯನ್ನು ತುಂಬಿಕೊಂಡು, ಎಲ್ಲರೊಡನೆ ಹುಲ್ಲ ಹೊರೆಹೊತ್ತು ಚೋಳರಾಯನ ಕುದುರೆಗಳ ಪಾಳಯಕ್ಕೆ ಬಂದು ಹುಲ್ಲು ಹೊರೆ ಹಾಕಿ ಮನೆಗೆ ಬರುತ್ತಿದ್ದನು. ಅಲ್ಲಿ ಚೆನ್ನಯ್ಯನ ಪುಣ್ಯಾಂಗನೆ ಅಂಬಲಿಯನ್ನು ಮಾಡಿ ಆತನ ಬರವನ್ನೇ ನಿರೀಕ್ಷಿಸುತ್ತ ಕುಳಿತಿರುತ್ತಿದ್ದಳು. ಚೆನ್ನಯ್ಯನು ಆ ಅಂಬಲಿಯಲ್ಲಿ ತನ್ನ ಭಕ್ತಿಯ ಅಮೃತವನ್ನು ಬೆರಸಿ ಅದನ್ನು ಶಿವನಿಗರ್ಪಿಸಿ ತಾನೂ ಸೇವಿಸುತ್ತಿದ್ದನು. ಆ ಅಂಬಲಿಯ ರುಚಿಗೆ ಶಿವನ ಬಾಯಲ್ಲಿ ನೀರೂರುತ್ತಿತ್ತು. **ಒಲವಿದ್ದಲ್ಲಿ ಅಂಬಲಿಯೇ ಅಮೃತ, ಕಂಬಳಿಯೇ ಚೀನಾಂಬರವಲ್ಲವೆ?**

ಚೆನ್ನಯ್ಯನ ಗುಪ್ತಭಕ್ತಿ ಹೀಗೆಯೇ ಸಾಗಿತು. ಅರುವತ್ತು ವರುಷಗಳು ಕಳೆದವು. ಆದರೂ ಶಿವನೊಬ್ಬನನ್ನುಳಿದು ಇನ್ನಾರಿಗೂ ಚೆನ್ನಯ್ಯನ ಭಕ್ತಿ ಗೊತ್ತಿರಲಿಲ್ಲ. ಎಲ್ಲರ ಕಣ್ಣಿನಲ್ಲೂ ಅವನೊಬ್ಬ ಕರಿಕಾಲ ಚೋಳನ ಕುದುರೆಗಳಿಗೆ ಹುಲ್ಲು ತಂದೊದಗಿಸುವ ಕೂಲಿಕಾರ. ಕುಲದಿಂದ ಮಾದರವನು, ವೃತ್ತಿಯಿಂದ ಕೂಲಿಕಾರ. ಶಿವನಿಗಿದನ್ನು ಸೈರಿಸಲಾಗಲಿಲ್ಲ. ತನ್ನ ಭಕ್ತರಲ್ಲಿಯೇ ಶ್ರೇಷ್ಠನಾದ, ಗರಿಷ್ಠನಾದ ಚೆನ್ನಯ್ಯನಿಂತು ಅಜ್ಞಾತನಾಗಿಯೆ ಉಳಿಯಬೇಕೆ? ಅನ್ಯರಿಗೆ ಈತನ ಹಿರಿಮೆ ಗರಿಮೆಗಳು ಗೊತ್ತಾಗಲೇಬಾರದೆ? ಇದು ಸರಿಯಲ್ಲ. ಜಗತ್ತಿಗೆಲ್ಲ ಈ ಜಗದ್ವಂದ್ಯನ ನಿಜಸ್ವರೂಪ ಗೊತ್ತಾಗಲೇಬೇಕು. ಘನತೆಯ ಗುರುತು ಧನವಲ್ಲ, ಮನವೆಂಬುದು ಲೋಕಕ್ಕೆ ಮನದಟ್ಟಾಗಬೇಕು.

ಒಮ್ಮೆ ಚೆನ್ನಯ್ಯ ರಾತ್ರಿಯಲ್ಲಿ ಅಂಬಲಿಯುಣ್ಣುತ್ತಿರುವಾಗ, ಶಿವನೂ ಅದನ್ನು ಸೇವಿಸಿ ಸಂತೃಪ್ತನಾದನು. ಕರಿಕಾಲ ಚೋಳನಿಗೆ ಚಿಂತೆಯುಂಟಾಗಿದ್ದಿತಂತೆ– ನಾನು ಮುದುಕನಾದೆ. ನನ್ನ ತರುವಾಯ ಶಿವನಿಗೆ ಸಕಲ ನೈವೇದ್ಯಗಳನ್ನು ಸಲ್ಲಿಸುವವರಾರೆಂದು! ಆತನ ಮಮಕಾರ ನಿರಸನಕ್ಕಾಗಿ ಚೆನ್ನಯ್ಯನ ಮನೆಯಲ್ಲುಂಡನಂತೆ ಶಿವನು. ಮೊದಲನೆಯ ಗುಟುಕಿಗೇ ಶಿವಪದವನ್ನು ಕೊಟ್ಟುಬಿಟ್ಟ; ಮುಂದಿನ ಗುಟುಕುಗಳಿಗಿನ್ನೇನು ಕೊಡಲೆಂದು ಶಿವನೇ ಚಿಂತಿಸಿದನಂತೆ! ಅದೆಂಥ ಅಂಬಲಿ ಚೆನ್ನಯ್ಯನದು!

ಬೆಳಗಾಯಿತು – ಇಂದು ಚೆನ್ನಯ್ಯನ ಭಕ್ತಿ ಭುವಿಯಲ್ಲೆಲ್ಲ ಬೆಳಗುವುದೆಂಬುದನ್ನು ಸಾರುತ್ತ. ಕರಿಕಾಲ ಚೋಳ ಎಂದಿನಂತೆ ಮುಂಜಾನೆಯ ಪೂಜೆಗಾಗಿ ದೇವಾಲಯಕ್ಕೆ ಬಂದನು. ರಾಜೋಚಿತವಾಗಿ ಪೂಜಾದಿಗಳನ್ನು ಮುಗಿಸಿ ದಿವ್ಯಾನ್ನ, ದೇವಾನ್ನ, ಅಮೃತಾನ್ನಗಳನ್ನು ಇರಿಸಿ 'ಆರೋಗಿಸು ತಂದೆ' ಎಂದು ತೆರೆಯ ಹಿಂದೆ ನಿಂತನು. ಸ್ವಲ್ಪ ಹೊತ್ತು ತಡೆದು ಬಂದು ನೋಡುತ್ತಾನೆ– ಎಂದಿನಂತೆ ಶಿವನವುಗಳನ್ನು ಸೇವಿಸದೆ ಸುಮ್ಮನಿದ್ದಾನೆ. ಚೋಳರಾಯನ ಕರುಳಿಗೆ ಚೇಳು ಕಡಿದಂತಾಯಿತು. ಖಡ್ಗವನ್ನೆಳೆದು ಕಂಠವನ್ನು ಕತ್ತರಿಸಿಕೊಳ್ಳಲು ಅದನ್ನು ಮೇಲೆತ್ತಿದನು.

**ಒರೆಯ ಕತ್ತಿಯ ಚೋಳ ಹಿರಿದು ಕತ್ತಿಗೆ ಇಡಲು**
**ಕೊರಳ ಶಿವಲಿಂಗ ಕೈಹಿಡಿದು – ಎಲೆ ಚೋಳ**
**ತರವಲ್ಲ ಹತ್ಯೆ ಭಕ್ತನಿಗೆ..........**

"ಸೈರಿಸು ಸೈರಿಸು ಚೋಳ ಭೂಪಾಲ" ಎಂದು ಶಿವನು ಅದನ್ನು ತಡೆದು, "ಚೆನ್ನಯ್ಯನ ಅಂಬಲಿಯು ಬಹಳ ರುಚಿಯಾಗಿದ್ದುದರಿಂದ ಬಹಳ ಸೇವಿಸಿಬಿಟ್ಟೆ. ಇಂದು ಹಸಿವೆ ಇಲ್ಲ. ನೀನು ಬೇರೆ ಭಾವಿಸಿಕೊಳ್ಳಬೇಡ" ಎಂದು ಸಂತೈಸಿದನು. ಚೆನ್ನಯ್ಯನ ಅಂಬಲಿ! ಶಿವನದನ್ನು ಸವಿದು ತನ್ನ ರಾಜಾನ್ನವನ್ನು ಧಿಕ್ಕರಿಸಿದ! ಚೋಳರಾಯನು ಬೆರಗಾದ.

**"ತೋರಿರೇ ಚಂದ್ರಮೌಳಿಯ ಭಕ್ತ ಚೆನ್ನನಂ ತೋರಿರೇ**
**ಷಡ್ವರ್ಗಕರ್ಣನಂ ಚೆನ್ನನಂ ತೋರಿರೇ**
**ಚೆನ್ನನಂ ತೋರಿ ಎನ್ನಂ ಕಾಯ್ದುಕೊಳ್ಳಿರೇ**
**ಚೆನ್ನಯ್ಯನೆನ್ನಯ್ಯನಿರ್ದೆಡೆಯನರುಪಿರೇ**
**ಚೆನ್ನಯ್ಯನಿರ್ಪ ಗುಡಿಯಿದೇ ಎಂದು ತೋರಿರೇ**
**ಚೆನ್ನಯ್ಯ ಭಕ್ತನೆನ್ನಯ್ಯನಂ ತೋರಿರೇ......"**

ಎಂದು ಹಲುಬುತ್ತ, ಕಾಂಚೀಪಟ್ಟಣದ ಸಂದಿಗೊಂದುಗಳನ್ನೆಲ್ಲ ಅರಸುತ್ತ, ಕೇರಿಯಲ್ಲಿದ್ದ ಚೆನ್ನಯ್ಯನ ಕುಟೀರಕ್ಕೆ ಬಂದನು. ಅವನ ಹಿಂದೆ ಹಿಂದೆ ರಾಜದೂತರೂ, ರಾಜಪರಿವಾರವೂ ಬಂದುವು. ಅವನನ್ನು ನೋಡಿ ಚೆನ್ನಯ್ಯ ಗಾಬರಿಯಾದ. ಚೋಳರಾಯ

**ಭಕ್ತಿ ಗುಡಿಸಿರ್ದ ಗುಡಿಸಲೊಳಿರ್ಪನಂ ಕಂಡು**
**ಮುಕ್ತಿ ಮೂವಡಿಸಿ ಮುಂದಡಸಿರ್ದನಂ ಕಂಡು**
**ಪುಳುಕಿಸುತೆ ಪುಟವೇರುತರ್ಬುತಂ ಕೊರ್ಬುತಂ**
**ಎನ್ನೊಡೆಯನಿದನಿದನೆ ಚೆನ್ನಯ್ಯನೆಂದೆನುತ**
**ಎನ್ನ ಸುಧೆಯಿದನಿದನೆ ಚೆನ್ನಯ್ಯನೆಂದೆನುತ**
**ಇಳುಪಿದಂ ಸರ್ವಾಂಗಮಂ ಚೆನ್ನನಂಘ್ರಿಯೊಳ್**

ಚೆನ್ನಯ್ಯ ಚಿತ್ತವಿಹ್ವಲನಾಗಿ, "ಏನಿದು ದೊರೆಗಳೆ, ಕುಲಹೀನನಾದ ನನಗೆ ಸೂರ್ಯಕುಲೋತ್ತಮನ್ನ ಸಾರ್ವಭೌಮರಾದ ತಾವು ನಮಸ್ಕರಿಸುವುದೆ? ಎಂಥ ಅನುಚಿತವಿದು" ಎಂದನು. ಅದಕ್ಕೆ ಚೋಳರಾಯನಿತ್ತ ಉತ್ತರ ಸರ್ವಾಗಮಸಾರ:

**ಎಲೆ ದೇವಾ! ದೇವನೊಲ್ದನ ಕುಲಂ ಸತ್ಕುಲಂ**
**ಘನಮಹಿಮನೊಲ್ದ ಜಾತಿಯೇ ಜಾತಿ ನಿರ್ಮಲಂ**
**ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ?**
**ಸರ್ವಜ್ಞ ನಿಮ್ಮ ಕೆರವಿಂಗೆನ್ನ ಶಿರ ಸರಿಯೆ?**

ಮುಂದೆ ಬಸವಣ್ಣನವರ ಬಾಯಿಂದ ಹೊರಟ "ಕುಲವೇನೋ, ಆವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು!", "ನೀನೊಲಿದ ಕುಲಕ್ಕೆ, ನೀನೊಲಿಯದ ಹೊಲೆಗೆ ಮೇರೆಯುಂಟೇ ದೇವಾ?", "ದೇವ ನಿಮ್ಮ ನಂಬದವನೇ ಹೊಲೆಯ!", " ದೇವಾ ನಿಮ್ಮ ಶರಣರ ಚಮ್ಮಾವುಗೆಗಳಿಗೆ ಈ ಪೃಥ್ವಿ ಸರಿ ಬಾರದಯ್ಯ" ಎಂಬ ವಚನಗಳಿಗೆ ಪೂರ್ವಪೀಠಿಕೆಯಂತಿದೆ ಈ ಉತ್ತರ.

ತನ್ನ ಗುಪ್ತ ಭಕ್ತಿಯನ್ನಿಂತು ಬಯಲಿಗೆಳೆದುದಕ್ಕಾಗಿ ಚೆನ್ನಯ್ಯ ಶಿವನ ಮೇಲೆ ಸಿಟ್ಟಾಗಿ ತನ್ನ ಶಿರ ಕೊಯ್ದುಕೊಳ್ಳಲು ಮುಂದಾದನಂತೆ.

**ಶಿವಲಿಂಗ ಕಾಣುತಲಿ ಶಿವನೆಂದು ಚೆನ್ನಯ್ಯ**
**ಅವಸರದಿ ಹೊಕ್ಕು ಗುಡಿಯನ್ನು – ಕೇಳಿದನು**
**ಶಿವ ನಿನಗೆ ತರವೆ ಈ ಆಟ!**
**ಹಿಡಿಸೆನ್ನ ತರಿಸಿದಿರಿ ಒಡೆಯ ಚೋಳನ ಕೂಡ**
**ಕಡುಮಾತು ಹೇಳು ಮಾಡಿರುವ ಅಪರಾಧ**
**ಒಡಭಕ್ತನಾಗಿ ನಾನಿದ್ದೆ**
**ಬೇಡಿಲ್ಲ ಪದವಿಯನು ಕಾಡಿಲ್ಲ ಕೊಡದಿರಲು**
**ಮಾಡಿ ಶಿವಭಕ್ತಿ ಅರಿಯದೆಲೆ ನಾನಿದ್ದೆ**
**ಕೇಡು ಜನ ಕೇಳಿ ನಾನಿರಲೆ?**
**ಇದೆ ಕೊಳ್ಳು ಶಿವ ನಿನ್ನ ಹದವಾದ ಶಿವಭಕ್ತಿ**
**ಎದೆ ಮಾತು ಎಂದು ಕಂಭಕ್ಕೆ – ತಲೆಗೊಡಲು**
**ಸದರು ಝುಗಝುಗಿಸಿ ಶಿವನೆದ್ದ**

ಶಿವನಾತನನ್ನು ಎಂತೋ ರಮಿಸಿ ಶಿವಪದವನಿತ್ತನಂತೆ. ಚೋಳರಾಯ ಚೆನ್ನಯ್ಯನನ್ನು ಆನೆಯ ಮೇಲೆ ಅಂಬಾರಿಯಲ್ಲಿ ಕುಳ್ಳಿರಿಸಿ ನಗರದಲ್ಲೆಲ್ಲ ಮೆರಸಿದನಂತೆ. ಇವಾವೂ ಮುಖ್ಯವಲ್ಲ. ಮಾದರವನಾಗಿ ಹುಟ್ಟಿ ವೇದವನ್ನೋದುವವರಿಗೂ ಪೂಜ್ಯನಾದ ಚೆನ್ನಯ್ಯನ ಗುಪ್ತಭಕ್ತಿ, ನಿಷ್ಕಾಮ ಭಕ್ತಿ, ನಿರಾಡಂಬರ ಭಕ್ತಿ ಮುಖ್ಯವಾದುದು. ಸಂಖ್ಯೆಯಲ್ಲಿ ಸ್ವಲ್ಪವಾದರೂ ಅರ್ಥದಲ್ಲಿ ಅಲ್ಪವಲ್ಲದ ಅವನ ವಚನಗಳಲ್ಲಿ ಆತನ ಆದರ್ಶ ಹೆಪ್ಪುಗಟ್ಟಿದಂತಿದೆ. ಇದೊ ಕೇಳಿ:

**"ನಡೆ ನುಡಿ ಸಿದ್ಧಾಂತವಾದಲ್ಲಿ ಕುಲಹೊಲೆ ಸೂತಕವಿಲ್ಲ. ನುಡಿ ಲೇಸು, ನಡೆಯಧಮವಾದಲ್ಲಿ ಅದೇ ಹೊಲೆ. ಇಲ್ಲವೆ ಹೊಲೆ ಪರದಾರಂಗಳಲ್ಲಿ? ಹೊಲಬನರಿಯದೆ ಕೆಟ್ಟು ನಡೆಯುತ್ತ ಮತ್ತೆ ಕುಲಜರೆಂಬ ಒಡಲವರುಂಟೆ? ಆಚಾರವೇ ಕುಲ, ಅನಾಚಾರವೇ ಹೊಲೆ. ಇಂತೀ ಉಭಯವ ತಿಳಿದು ಅರಿಯದೇಕು. ಕಯ್ಯುಳಿಗತ್ತಿ ಅಡಿಗೂಂಟಕ್ಕೆಡೆಯಾಗಬೇಡ – ಅರಿ ನಿಜಾತ್ಮ ರಾಮರಾಮನ!"**

**ವೇದಶಾಸ್ತ್ರಕ್ಕೆ ಹಾರುವನಾಗಿ, ವೀರವಿತರಣಕ್ಕೆ ಕ್ಷತ್ರಿಯನಾಗಿ, ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ ವ್ಯವಹಾರದೊಳಗಾಗಿ, ಕೃಷಿಯ ಮಾಡುವುದಕ್ಕೆ ಶೂದ್ರನಾಗಿ – ಇಂತೀ ಜಾತಿಗೋತ್ರದೊಳಗಾದ ನೀಚ ಶ್ರೇಷ್ಠವೆಂಬೆರಡು ಕುಲವಲ್ಲದೆ ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ. ಬ್ರಹ್ಮವನರಿದಲ್ಲಿ ಬ್ರಾಹ್ಮಣ; ಸರ್ವಜೀವ ಹಿತಕ್ಕೊಳಗಾದಲ್ಲಿ ಸಮ್ಮಗಾರ. ಈ ಉಭಯವನರಿದು ಮರೆಯಲಿಲ್ಲ. ಕೈಯುಳಿಗತ್ತಿ ಅಡಿಗೊಂಟಕ್ಕೆ–ಡೆಯಾಗಬೇಡ. ಅರಿ ನಿಜಾತ್ಮ ರಾಮರಾಮನ!**

ಮುಂಬರವ ಬಸವಾದಿ ಪ್ರಮಥರ ತತ್ವಗಳಿಗೆ ಮುನ್ಸೂಚನೆ ಈ ವಚನಗಳಲ್ಲಿದೆ. ಎಂಥ ಮಹಾನುಭಾವ ಮಾದಾರ ಚೆನ್ನಣ್ಣ! **ಚೆನ್ನನ ನಿಧಿ ಚೆನ್ನನ ಸುಧೆ! ಚೆನ್ನನ ಸಕಳಾಯು ಚೆನ್ನನಮೃತ ಸಮುದ್ರಂ॥ ಚೆನ್ನಂ ರಕ್ಷಿಸುಗೆನ್ನಂ। ಚೆನ್ನನ ಸುತನೆಂದು ಹಂಪೆಯ ವಿರೂಪಾಕ್ಷ॥** ಎಂದು ಹರಿಹರನಂತೆ ನಾವೂ ಪ್ರಾರ್ಥಿಸೋಣ.

**ಅಂಬಲಿಯೊ ಅಮೃತವೊ ಶಂಭುಹರನೆಂಜಲವೊ**
**ಹಂಬಲಿಸಿ ಹರನು ಉಣ್ಣುವುದೊ ಶರಣನಿಗೆ**
**ನಂಬಿ ಶಿವಕೊಟ್ಟ ಶಿವಪದವೊ॥**

**(ಆಧಾರಗ್ರಂಥ: ಶ್ರೀ ಸಿದ್ಧಯ್ಯ ಪುರಾಣಿಕರ ಶರಣ ಚರಿತಾಮೃತ; ಸಂಗ್ರಹ: ಸುಶೀಲಮ್ಮ, ಬೆಂಗಳೂರು)**

## ಸ್ನೇಹಪ್ರಭ

### ಖಿನ್ನತೆಗೆ ಕಾರಣ ಏನು? ಅದಕ್ಕೆ ಪರಿಹಾರ ಹೇಗೆ?

ಖಿನ್ನತೆಗೆ ಮುಖ್ಯ ಕಾರಣ ಅಂತರಂಗದ ಖಾಲಿತನ. ನಾವು ಹೊರಗಿನ ಸಮೃದ್ಧತೆಯನ್ನು ಬಯಸುತ್ತೇವೆ. ಒಳಗು ಬರಿದಾಗಿ ಉಳಿಯುತ್ತದೆ. ಸಾರ್ಥಕತೆಯ ತುಂಬು ಜೀವನವೇ ಖಿನ್ನತೆಗೆ ಪರಿಹಾರ. ಬಾಹ್ಯ ಸಮೃದ್ಧಿ ಎಷ್ಟೇ ಇದ್ದರೂ ಅಂತರಂಗದಲ್ಲಿ ಯಾವಾಗಲೂ ಒಂದು ರೀತಿಯ ಕೊರತೆಯನ್ನು ಅನುಭವಿಸುತ್ತಿದ್ದರೆ ಖಿನ್ನತೆ ಸ್ವಾಭಾವಿಕವಾಗಿಯೆ ಬರುತ್ತದೆ. ಈ ಕೊರತೆಯನ್ನು ನೀಗಿಸಲು ನಾವು ಹೊರಗಿನಿಂದ ಪ್ರಶಂಸೆ, ಕೀರ್ತಿ, ಅಧಿಕಾರ, ಹಣ ಮುಂತಾದವುಗಳನ್ನು ಬಯಸುತ್ತೇವೆ. ಆದರೆ ಹೊರಗಿನ ವಿಷಯಗಳಿಂದ ಒಳಗಿನ ಖಾಲಿತನವನ್ನು ಹೋಗಲಾಡಿಸಿಕೊಳ್ಳಲಾಗುವುದಿಲ್ಲ. ಒಂದು ಬೀಜದೊಳಗೆ ಸತ್ವವಿಲ್ಲದಿದ್ದರೆ, ಅದಕ್ಕೆ ಎಷ್ಟೇ ಗೊಬ್ಬರ, ನೀರು ಹೊರಗಿನಿಂದ ಹಾಕಿದರೂ ಅದು ಮೊಳೆಯುವುದಿಲ್ಲ. ಹಾಗೆಯೇ ಅಂತರಂಗವು ಖಾಲಿಯಾಗಿದ್ದರೆ ಹೊರಗಿನ ಪರಿಕರಗಳಾವುವೂ ಸಹಾಯಕವಾಗವು. ನಾವು ಸಾರ್ಥಕತೆಯ ಭಾವದಲ್ಲಿ ಸುಖವನ್ನು ಕಾಣುವಂತಾಗಬೇಕು. ನಮಗೆ ಎರಡೇ ವಿಷಯಗಳು ಸಾರ್ಥಕತೆಯನ್ನು ಕೊಡುವಂತಹವು: **'ಆತ್ಮೋನ್ನತಿ'** ಮತ್ತು **'ಜಗದ್ಧಿತ'** – ಒಂದು ಒಳತುಂಬುವಿಕೆ, ಮತ್ತೊಂದು ಹೊರಸೂಸುವಿಕೆ. ಅಂತರಿಕ ಶಕ್ತಿ, ಸಾಮರ್ಥ್ಯ, ಪ್ರತಿಭೆ, ದಿವ್ಯತೆ – ಇವುಗಳ ಸೂಕ್ತ ಅಭಿವ್ಯಕ್ತಿಯಿಂದ ಅಂತರಂಗವು ತುಂಬಿಕೊಳ್ಳುತ್ತದೆ. ಇತರರಿಗೆ ಸಂತೋಷವನ್ನು ಉಂಟುಮಾಡುವುದರಿಂದ ಮೂಡುವ ಸಾರ್ಥಕತೆಯ ಭಾವದಿಂದಲೂ ಅಂತರಂಗವು ತುಂಬಿಕೊಳ್ಳುತ್ತದೆ. ಇದೇ ತುಂಬು ಜೀವನ – ಹೊಟ್ಟೆ ತುಂಬ ಊಟ ಮಾಡುವುದಲ್ಲ. ಮಿದುಳಿನ ತುಂಬ ಸಚ್ಚಿಂತನೆಗಳು, ಹೃದಯದ ತುಂಬ ಸದ್ಭಾವನೆಗಳು, ಕೈತುಂಬ ಕೆಲಸ – ಇವುಗಳಿದ್ದರೆ ಖಿನ್ನತೆಗೆ ಅವಕಾಶವಿಲ್ಲ. ನಮ್ಮದು ಹೊಟ್ಟೆ ತುಂಬ ಊಟ, ಬಾಯಿ ತುಂಬ ಮಾತು, ಜೇಬು ತುಂಬ ಹಣ – ಇದು ತುಂಬು ಜೀವನವಲ್ಲ, ದೊಂಬಿಯ ಜೀವನ. ಇದು ಹೋಗಬೇಕು.

ಬರಹ: ಸ್ವಾಮಿ ನಿತ್ಯಸ್ಥಾನಂದ